## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ವೈ.ಎ. ನಾರಾಯಣಸ್ವಾಮಿ ರವರು ನಿಯಮ-72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ**

------

ವಿಷಯ: ಕರ್ನಾಟಕ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿರ್ಮಿಸಿರುವ "ಟೋಲ್ ಪ್ಲಾಜಾ" ಗಳಲ್ಲಿ ವಾಹನ ದಟ್ಟಣೆ ಸಾಮರ್ಥ್ಯ ನಿಭಾಯಿಸಲು ಮೂಲ ಸೌಕರ್ಯ ಇಲ್ಲದೆ ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದಾರೆ. ಜೊತೆಗೆ ಕೆಲವು ಟೋಲ್ ಪ್ಲಾಜಾಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿದ್ದು ಮತ್ತು ಅವಧಿ ಮುಗಿದ ನಂತರವೂ ನಿಯಮ ಬಾಹಿರವಾಗಿ ಟೋಲ್ ಪ್ಲಾಜಾನಿಂದ ಹಣ ವಸೂಲಿ ಮಾಡುತ್ತಿರುವ ಪ್ರಕರಣಗಳ ಜೊತೆಗೆ ಉದ್ದೇಶಿತ ರಸ್ತೆಯ ಮೂಲ ಕರಾರುಗಳನ್ನು ಪೂರ್ಣಗೊಳಿಸದೆ ಟೋಲ್ ಅನ್ನು ವಸೂಲಿ ಮಾಡುತ್ತಿರುವ ಗಂಭೀರ ವಿಚಾರವನ್ನು ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

### <u>ಸರ್ಕಾರದ ಉತ್ತರ</u>

1. ರಾಜ್ಯದಲ್ಲಿ ಪ್ರಾದೇಶಿಕ ಅಧಿಕಾರಿಗಳು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ವ್ಯಾಪ್ತಿಯಲ್ಲಿ 50 ಸಂಖ್ಯೆಯ ಮತ್ತು ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ವಲಯ ವ್ಯಾಪ್ತಿಯಲ್ಲಿ 06 ಟೋಲ್ ಪ್ಲಾಜಾಗಳು ಕಾರ್ಯನಿರ್ವಹಿಸುತ್ತಿವೆ.

2. ಎಲ್ಲಾ ಟೋಲ್ ಪ್ಲಾಜಾಗಳಲ್ಲಿ Radio Frequency Identification Devices (RFID) ಅಳವಡಿಸಲಾಗಿದ್ದು, ಇದು ಫಾಸ್ಟ್ ಟ್ಯಾಗ್ ಗಳನ್ನು ಸ್ವಯಂಚಾಲಿತವಾಗಿ ಓದುವ, ಗುರುತಿಸುವ Electronic Toll Collection (ETC) ವಿಧಾನವಾಗಿದೆ. ಎಲ್ಲಾ ಟೋಲ್ ಪ್ಲಾಜಾಗಳ ಲೇನ್‌ಗಳನ್ನು ಈಗ FASTag ಸೌಲಭ್ಯಗಳೊಂದಿಗೆ ಸಕ್ರಿಯಗೊಳಿಸಲಾಗಿದೆ. ಇದು ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿನ ಟೋಲ್ ಪ್ಲಾಜಾಗಳಲ್ಲಿ ವಾಹನ ಬಳಕೆದಾರರ ಕಾಯುವ ಸಮಯವನ್ನು ಮತ್ತು ವಾಹನಗಳ ದಟ್ಟಣೆಯನ್ನು ಗಣನೀಯವಾಗಿ ಕಡಿಮೆ ಮಾಡುವ ವ್ಯವಸ್ಥೆಯಾಗಿರುತ್ತದೆ.

3. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ನವದೆಹಲಿಯ ದಿನಾಂಕ:09.11.2019ರ FASTag ಅನುಷ್ಠಾನದ ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP) ಪ್ರಕಾರ ವಾಹನ ಬಳಕೆದಾರರು ಶುಲ್ಕದ ರಸ್ತೆಗಳ ಟೋಲ್ ಪ್ಲಾಜಾಗಳಲ್ಲಿ ಹಾದು ಹೋಗುವಾಗ ವಾಹನಗಳು FASTag ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ. FASTag ಇಲ್ಲದೆ ಟೋಲ್ ಪ್ಲಾಜಾ ಪ್ರವೇಶಿಸುತ್ತಿರುವ ವಾಹನಗಳಿಗೆ ಅದರ ಅನುಷ್ಠಾನಕ್ಕಾಗಿ ಗೆಜೆಟ್ ಅಧಿಸೂಚನೆ G. S. R-298 Dated 15.05.2020 ರಂತೆ ದುಪ್ಪಟ್ಟು ಟೋಲ್ ದರವನ್ನು ವಿಧಿಸಿ ಈ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ. FASTag ಇಲ್ಲದ ವಾಹನಗಳು ಪ್ರವೇಶಿಸುತ್ತಿರುವುದರಿಂದ ಮತ್ತು FASTag ಗಳಲ್ಲಿ ಕನಿಷ್ಠ ಮೊತ್ತದ ಸಮತೋಲನ ಕಾಪಾಡಿಕೊಳ್ಳದಿರುವುದಕ್ಕೆ ಟೋಲ್ ಪ್ಲಾಜಾಗಳಲ್ಲಿ ವಾಹನಗಳ ದಟ್ಟಣೆ ಉದ್ಭವಿಸುತ್ತಿದೆ. FASTag ಕಾರ್ಯಗತಗೊಳಿಸುವಿಕೆ ಮತ್ತು ವಿತರಣೆಯು ನಿರಂತರವಾಗಿದ್ದು ಎಲ್ಲಾ ವಾಹನಗಳು FASTag ಅಳವಡಿಸಿಕೊಂಡರೆ ಈ ಸಮಸ್ಯೆ ನಿವಾರಣೆಯಾಗಲಿದೆ, Public......

--2

4. ಯೋಜನೆಯ ಮೂಲ ವೆಚ್ಚ ಸಂಗ್ರಹದ ನಂತರ (ಟೋಲ್ ಶುಲ್ಕ ವಸೂಲಾತಿ ಅವಧಿ ಮುಗಿದ ನಂತರ) ಸದರಿ ರಸ್ತೆಯ ಮುಂದಿನ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ GOI, NHAI ರಿಂದ ಅಥವಾ ಪ್ರತ್ಯೇಕ ಟೆಂಡರ್ ಕರೆದು GOI ದಿಂದ ಅನುಮೋದನೆ ಪಡೆದು ನಂತರ ಶೇಕಡ 40% ರಷ್ಟು ಕಡಿಮೆ ದರದಲ್ಲಿ ಅದೇ ಟೋಲ್ ಪ್ಲಾಜಾಗಳಲ್ಲಿ ಏಜೆನ್ಸಿ ಮೂಲಕ ಶುಲ್ಕ ವಸೂಲಿ ಮಾಡಲಾಗುತ್ತದೆ, ಹಾಗೂ ಕರಾರಿನಂತೆ ಕಾಮಗಾರಿ ಪೂರ್ಣಗೊಂಡ ರಸ್ತೆಯ ಭಾಗಕ್ಕೆ ಮಾತ್ರ ಟೋಲ್ ಶುಲ್ಕ ವಸೂಲಾತಿ ಮಾಡಲಾಗುತ್ತಿದೆ. ಅವಧಿ ಮುಗಿದ ನಂತರವೂ ನಿಯಮ ಬಾಹಿರವಾಗಿ ಟೋಲ್ ಪ್ಲಾಜಾದಿಂದ ಹಣ ವಸೂಲಿ ಮಾಡುತ್ತಿರುವ ಪ್ರಕರಣಗಳಿರುವುದಿಲ್ಲ.

5. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ನವದೆಹಲಿಯ ರಾಷ್ಟ್ರೀಯ ಹೆದ್ದಾರಿ ಶುಲ್ಕ (ದರ ಮತ್ತು ಸಂಗ್ರಹ ನಿರ್ಧಾರ) ನಿಯಮ ದಿನಾಂಕ:05-12-2008, ತದನಂತರದ ತಿದ್ದುಪಡಿ 2010 ರಂತೆ ಹಾಗೂ ಪ್ರತಿ ವರ್ಷ ಹೊರಡಿಸುವ ದರ ಪರಿಷ್ಕರಣೆ, ಗೆಜೆಟ್ ಅಧಿಸೂಚನೆ ಮತ್ತು ಕರಾರಿನಂತೆ ಟೋಲ್ ದರ ನಿಗದಿ ಮಾಡಿ ಸಂಗ್ರಹಿಸಲಾಗುತ್ತಿದೆ. ಇದರಿಂದ ಯಾವುದೇ ಟೋಲ್ ಪ್ಲಾಜಾಗಳಲ್ಲಿ ಹೆಚ್ಚಿನ ದರ ವಿಧಿಸಲಾಗುವುದಿಲ್ಲ.

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸಂಖ್ಯೆ: ಲೋಇ 134 ಸಿಎನ್‌ಹೆಚ್ 2023 (ಇ)